I/435553/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: E- 888441 DPUE-EST3/2/2022

ದಿನಾಂಕ: 03-06-2023

# ಜ್ಞಾಪನ

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ ಮತ್ತು ಬೋಧಕೇತರ ಅಧಿಕಾರಿ/ಸಿಬ್ಬಂದಿಗಳಿಗೆ ಕೆಲವು ಸೇವಾ ಸೌಲಭ್ಯಗಳನ್ನು ಆನ್‌ಲೈನ್ ವ್ಯವಸ್ಥೆ ಮುಖಾಂತರ ಅನುಷ್ಠಾನದ ಸಂಬಂಧ ಮೂಲಭೂತ ಸೌಲಭ್ಯಗಳ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 31 ಟಿಪಿಯು 2023 (ಭಾಗ-1)ದಿ:17-05-2023
2. ಈ ಕಚೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:19-05-2023

-*-

ಸರ್ಕಾರದ ಆದೇಶ ಸಂಖ್ಯೆ: ಇಡಿ 31 ಟಿಪಿಯು 2023 (ಭಾಗ-1) ಬೆಂಗಳೂರು, ದಿನಾಂಕ:17-05-2023 ರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ ಮತ್ತು ಬೋಧಕೇತರ ಅಧಿಕಾರಿ/ಸಿಬ್ಬಂದಿಗಳಿಗೆ ಕೆಲವು ಸೇವಾ ಸೌಲಭ್ಯಗಳ ಮಂಜೂರಾತಿ ಅಧಿಕಾರವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಿ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಉಲ್ಲೇಖ-2 ರನ್ವಯ ಸರ್ಕಾರದ ಆದೇಶದ ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಕಳುಹಿಸಲಾಗಿರುತ್ತದೆ.

ಸರ್ಕಾರದ ಆದೇಶದನ್ವಯ, ಸದರಿ ಸೇವಾ ಸೌಲಭ್ಯಗಳನ್ನು ಜಿಲ್ಲಾ ಹಂತದಲ್ಲಿ ಮಂಜೂರು ಮಾಡುವ ಸಂದರ್ಭಗಳಲ್ಲಿ ಒಂದು ಕಚೇರಿಯಿಂದ ಇನ್ನೊಂದು ಕಚೇರಿಯ ಮಧ್ಯೆ ನಿಯಮಗಳನ್ನು ವ್ಯಾಖ್ಯಾನಿಸುವಲ್ಲಿ ವ್ಯತ್ಯಾಸ ಉಂಟಾಗುವುದನ್ನು ತಪ್ಪಿಸಲು, ಪ್ರಸ್ತಾವನೆಗಳನ್ನು ಇಲಾಖೆಯಲ್ಲಿನ ಆನ್‌ಲೈನ್ ವ್ಯವಸ್ಥೆ ಮುಖಾಂತರ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ಕುರಿತಾಗಿ ಆನ್‌ಲೈನ್ ವ್ಯವಸ್ಥೆ ಅಭಿವೃದ್ಧಿ ಪ್ರಕ್ರಿಯೆ ಇಲಾಖಾ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಆನ್‌ಲೈನ್ ವ್ಯವಸ್ಥೆ ಅಭಿವೃದ್ಧಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮತ್ತು ಕಚೇರಿಯ ಸಿಬ್ಬಂದಿಗಳಿಗೆ ಅಗತ್ಯ ತರಬೇತಿಯನ್ನು ನೀಡಿ, ಆನ್‌ಲೈನ್ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲಾಗುವುದು. ತರಬೇತಿಯ ದಿನಾಂಕವನ್ನು ಶೀಘ್ರದಲ್ಲಿ ತಿಳಿಸಲಾಗುವುದು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಚೇರಿ ಹಾಗೂ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ, ಆನ್‌ಲೈನ್ ವ್ಯವಸ್ಥೆ ಕಾರ್ಯರೂಪಕ್ಕೆ ಬಂದ ನಂತರ ಯಾವುದೇ ರೀತಿಯ ತಾಂತ್ರಿಕ ಸಮಸ್ಯೆ ಉದ್ಭವಿಸದಂತೆ ನೋಡಿಕೊಳ್ಳುವುದು ಜಿಲ್ಲಾ ಉಪ ನಿರ್ದೇಶಕರ ಹಾಗೂ ಕಾಲೇಜು ಪ್ರಾಂಶುಪಾಲರುಗಳ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ, ಅಗತ್ಯ ಸೌಲಭ್ಯಗಳಾದ ಕಂಪ್ಯೂಟರ್, ಇಂಟರ್‌ನೆಟ್ (ಲ್ಯಾನ್) ಸ್ಕಾನರ್, ಪ್ರಿಂಟರ್ ಮತ್ತು ಇತ್ಯಾದಿಗಳು ಸುವ್ಯವಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಿಕೊಂಡು, ಸಿದ್ಧತೆ ಮಾಡಿಕೊಳ್ಳತಕ್ಕದೆಂದು ಉಪ ನಿರ್ದೇಶಕರಿಗೆ ಹಾಗೂ ಪ್ರಾಂಶುಪಾಲರಿಗೆ ಸೂಚಿಸಿದೆ.

ಮುಂದುವರೆದು, ಪದವಿ ಪೂರ್ವ ಶಿಕ್ಷಣ ಇಲಾಖೆಯ ನೌಕರರು "ಶಿಕ್ಷಕ ಮಿತ್ರ" ತಂತ್ರಾಂಶವನ್ನು ಉಪಯೋಗಿಸಲು ಈ ಕೆಳಗಿನಂತೆ ಪೂರ್ವಭಾವಿ ಕ್ರಮ ವಹಿಸಬೇಕಾಗಿರುತ್ತದೆ.

1. ಸರ್ಕಾರಿ / ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಚಾರ್ಯರು ಅವರ ಕಾಲೇಜಿನ ನೌಕರರ ಸೇವಾ ವಿವರಗಳನ್ನು ಮೂಲ ಸೇವಾ ಪುಸ್ತಕದಲ್ಲಿರುವಂತೆ ನಿಖರವಾಗಿ ಮತ್ತು ಕಡ್ಡಾಯವಾಗಿ PUEEDS ತಂತ್ರಾಂಶದಲ್ಲಿ ನಮೂದಿಸಬೇಕಾಗುತ್ತದೆ.

I/435553/2023

2. ಹೀಗೆ ನಮೂದಿಸಿರುವ ವಿವರಗಳು 'ಶಿಕ್ಷಕ ಮಿತ್ರ" ತಂತ್ರಾಂಶ ಬಳಕೆ ಮಾಡುವಾಗ AUTO FETCH ಆಗಿ ಮುಂದಿನ ಕ್ರಮಕ್ಕೆ ಅವಕಾಶವಾಗುತ್ತದೆ.
3. ಒಂದು ವೇಳೆ ನಮೂದುಗಳನ್ನು ತಪ್ಪಾಗಿ ಇಂದೀಕರಿಸಿದ್ದರೆ, ಅವೇ ನಮೂದುಗಳು AUTO FETCH ಆಗಿ ಮುಂದೆ ಆನ್‌ಲೈನ್ ಸೇವೆ ಪಡೆಯುವಲ್ಲಿ ವ್ಯತ್ಯಯ ಉಂಟಾಗುತ್ತದೆ. ಆದ್ದರಿಂದ ನಿಖರವಾಗಿ ಸೇವಾ ಪುಸ್ತಕದಲ್ಲಿನ ಮಾಹಿತಿಯನ್ನು PUEEDS ತಂತ್ರಾಂಶದಲ್ಲಿ ನಮೂದಿಸುವುದನ್ನು ಕಡ್ಡಾಯಮಾಡಲಾಗಿದೆ. ತಪ್ಪಿದಲ್ಲಿ ಸಂಬಂಧಿಸಿದ ಪ್ರಾಂಶುಪಾಲರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

**Signed by Sindhu B Rupesh**
**Date: 03-06-2023 17:34:40**

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಇವರಿಗೆ:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ.
2. ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-(ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಮೂಲಕ)

**ಪ್ರತಿಯನ್ನು:**

1. ನಿರ್ದೇಶಕರು / ಜಂಟಿ ನಿರ್ದೇಶಕರು (ಆಡಳಿತ) / (ಮಾನ್ಯತೆ ಮತ್ತು ಅನುದಾನ) / (ಶೈಕ್ಷಣಿಕ) – ಇವರ ಆಪ್ತ ಶಾಖೆಗೆ.
2. ಉಪ ನಿರ್ದೇಶಕರು (ಆಡಳಿತ) / (ಮಾನ್ಯತೆ ಮತ್ತು ಅನುದಾನ) / (ಶೈಕ್ಷಣಿಕ) / (ಮೂಲಭೂತ ಸೌಕರ್ಯ).
3. ಸಹಾಯಕ ನಿರ್ದೇಶಕರು (ಲೆಕ್ಕ ಪತ್ರ) / ಲೆಕ್ಕಾಧಿಕಾರಿ (ಲೆಕ್ಕ ಪತ್ರ ಶಾಖೆ).
4. ಸಹಾಯಕ ನಿರ್ದೇಶಕರು (ಇ-ಆಡಳಿತ)-ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವುದು ಹಾಗೂ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಮಿಂಚಂಚೆ ಕಳುಹಿಸುವುದು.
5. ಕಚೇರಿ ಪ್ರತಿ.